# ಕಾಯಕನಾಥನ ಮನವೊಲಿಕೆ

‘ಇರಲಿ ಇದ್ದದ್ದನ್ನು ಹಂಚಿ ತಿನ್ನೋಣ ತಗೋ’ ಎನ್ನುತ್ತ ಡಬ್ಬಿಯ ಮುಚ್ಚಳದಲ್ಲಿ ತಾವು ತಂದ ಅನ್ನದ ಉಪಾಹಾರವನ್ನು ಬಡಿಸಿ ಕೊಟ್ಟರು. ಮರು ಮಾತನಾಡದೆ ಖಾಲಿ ಮಾಡಿಟ್ಟ. ಸ್ವಲ್ಪ ಹೊತ್ತಿದ್ದ ಯೋಗೀಶರು ಎದ್ದು ಹೊರಟರು.

‘ನಾನಿನ್ನು ಹೊರಡುವೆ. ನನಗೆ ನನ್ನ ಕೆಲಸ ಮಾಡಬೇಕಾಗಿದೆ. ನೀನು ನಿನ್ನ ಎಚ್ಚರದಲ್ಲಿರು’.

ಎರಡು ಹೆಜ್ಜೆ ಮುಂದೆ ಇಟ್ಟವರು ಏನೋ ನೆನಪಾದವರಂತೆ ನುಡಿದರು, ‘ಅಂದಹಾಗೆ ಹೇಳೋದನ್ನು ಮರೆತೆ. ಇದು ಖಾಸಗಿ ಆಸ್ತಿ ಅಲ್ವಾ ಇದಕ್ಕೆ ನಗರದಿಂದ ಬರಲು ಕಾಲು ದಾರಿ ಇದೆ. ಇಲ್ಲಿಂದ ಪೂರ್ವಕ್ಕೆ ನಡೆದರೆ ನಿನಗೆ ಕುಮುದಿನಿ ನದಿ ಸೇತುವೆ ಸಿಗುತ್ತೆ. ಈ ಪರಿಸರ ಬೇಡ ಎನಿಸಿದಾಗ ಆ ಹಾದಿ ಹಿಡಿಯಬಹುದು. ಮುಂದಿನ ಸಲ ಬೀಟ್‌ಗೆ ಬಂದಾಗ ನೀನು ಇರ್ತೀಯೋ ಇಲ್ವೋ ನನಗೊತ್ತಿಲ್ಲ. ನಿನ್ನ ಹಾದಿ ನೀನು ನೋಡಿಕೋ...’ ಎಂದು ಯೋಗೀಶರು ಅವನಿಗೆ ಕೈಬೀಸಿ ಬಂದ ಹಾದಿ ಹಿಡಿದರು. ಕಾಯಕನಾಥ ಪ್ರತಿಯೊಂದಿಗೆ ಮತ್ತೆ ಅನುಸಂಧಾನದಲ್ಲಿ ಮೈಮರೆತ.

* * *

ಮೊದಲು ಅವನು ಸೇರಿಕೊಂಡ ಕಾಡಿನಷ್ಟು ದಟ್ಟತೆ ಅಲ್ಲಿರಲಿಲ್ಲ. ನಡೆಯುವ ಭೂಮಿಯ ಪದರು ಮೆದುವಾಗಿರದೇ, ಸ್ವಲ್ಪ ಗಡುಸಾಗಿ ಮುರ (ಕೆಂಪು ಕಲ್ಲು) ರೂಪದಲ್ಲಿದ್ದ ಕಾರಣ ಅಲ್ಲಿ, ಗಿಡ, ಮರ ಅಷ್ಟು ಬೆಳೆಯದೇ ಇರಬಹುದೆಂದು ಅಂದಾಜಿಸಿದ. ಆಗಲೇ ಸಣ್ಣಗೆ ಕತ್ತಲಾವರಿಸತೊಡಗಿತ್ತು. ಮೇಲಿನ ಆಗಸದಲ್ಲಿ ಕಪ್ಪು ಮೋಡಗಳು ಹರಡುತ್ತಿದ್ದಂತೇ ಅದರ ಅಸ್ತಿತ್ವದ ಅಂಕುಶಕ್ಕೆ ಸಿಲುಕಿ ಸುತ್ತಲಿನ ಹಸಿರು ಕಪ್ಪು ಬಣ್ಣಕ್ಕೆ ತಿರುಗಿದಂತೆ ಭಾಸವಾಗಿ ತಾನೂ ಅದರೊಳಗೆ ಕರಗಿಹೋದಂತೆ ಭಾಸವಾಯಿತು. ಒಂಟಿಯಾಗಿ ಕುಳಿತಿರುವುದು ತುಸು ಕಷ್ಟವೇ ಎಂದೂ ಭಾಸವಾಯಿತು. ಒಂಟಿತನ ಮನುಷ್ಯನಿಗೆ ವರವೂ ಹೌದು, ಶಾಪವೂ ಹೌದು. ಏಕಾಂತವಾಗಿರುವಾಗ ಮನಸ್ಸು ಯೋಗಿಯಾಗಿಬಿಡುತ್ತದೆ. ಆತ್ಮಾವಲೋಕನದ ಪದರುಗಳಲ್ಲಿ ಮುಳುಗೇಳಿ ಮನಸ್ಸು, ಹೃದಯ ನಿಚ್ಚಳಗೊಂಡು ನಮ್ಮನ್ನು ನಾವು ಕಾಣಿಸಿಕೊಳ್ಳುವಂಥ ದರ್ಪಣವಾಗಿಸುತ್ತದೆ.

ಮನುಷ್ಯ ನಿನ್ನೆಗಳ ನೆನಪುಗಳಲ್ಲಿ, ನಾಳಿನ ಚಿಂತೆಯಲ್ಲಿ ಅವನು ಇಂದಿನದ್ದನ್ನು ಆಸ್ವಾದಿಸುವುದನ್ನು ಕಳೆದುಕೊಳ್ಳುತ್ತಾನೆ. ಆದರೆ ಕಾಯಕನಾಥನಿಗೆ ನಿನ್ನೆ ಎಂಬುದು ಮುಗಿದ ಅಧ್ಯಾಯದಂತಾಗಿತ್ತು. ನಾಳೆಯ ಗೊಡವೆ ಇರಲಿಲ್ಲ. ಸಾವನ್ನು ಸಮ್ಮುಖದಲ್ಲಿರಿಸಿ ಜೀವಿಸುತ್ತಿದ್ದ. ಧರಿಸಿದ್ದ ಬಟ್ಟೆಯ ಹೊರತಾಗಿ ಅವನ ಬಳಿ ಏನೂ ಇರಲಿಲ್ಲ. ಹಸಿವು, ಬಾಯಾರಿಕೆಯಾದಾಗಲೂ ಅದನ್ನು ತ್ಯಜಿಸಿ ಸಾವನ್ನು ಇನ್ನಷ್ಟು ಸಮೀಪಿಸಿಕೊಳ್ಳಬೇಕೆಂದು ಮನಸ್ಸು ನಿಗ್ರಹಿಸಬೇಕೆಂದು ನಿರ್ಧರಿಸಿದ್ದ. ಜೀವನಪ್ರೀತಿಯನ್ನೂ, ನಿರ್ಮೋಹವನ್ನೂ ನೋಡಿದವನು ಈಗ ಯೋಗಿಯಂತಾಗಿದ್ದ. ವಿರಕ್ತಿಯ ಛಾಯೆಯಡಿ ಎಲ್ಲವೂ ನಶ್ವರವಾಗಿಯೇ ಗೋಚರಿಸುತ್ತದೆ.

